## ರೆವಿನ್ಯೂ ಸರ್ವೇ ಮತ್ತು ಸೆಟಲ್‌ಮೆಂಟ್ ಇಲಾಖೆ.

ಂಬರ್ 78. ತಾರೀಖು 6ನೇ ಮಾಹೆ ಮೇ 1884.

ಸಮಸ್ತ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದ್ದರಡ್ಡಿ ಕಂಡ ಸರಕಾರ ಗ್ರಾಮಗಳ ರೆವಿನ್ಯೂ ಸರ್ವೆ ಜಮಾಬಂದಿಯು, ಇದೇ ತಿಂಗಳ 19ನೇ ತಾರೀಖಿನಲ್ಲಿ ಯಾ ಆಪುಮೂಲಿಗೆ ಪ್ರಾರಂಭಿಸಲ್ಪಡುತ್ತೆ.

| | | | |
|---|---|---|---|
| ಚನ್ನರಾಯಪಟ್ಣ ಬಾಬತು | ಗ್ರಾಮಗಳು 396 | ಅತ್ತಿಕುಪ್ಪ ಬಾಬತು ಗ್ರಾಮಗಳು .. | 2 |
| ಅರಕೀಕೆರೆ ಬಾಬತು ಗ್ರಾಮಗಳು .. | 18 | | |

ಜೆ. ಪಿ. ಗ್ಯಾಂಟ್,
ಸೂ॥ ತೆ॥ ಸರ್ವೆ ಮತ್ತು ಸೆಟಲ್‌ಮೆಂಟ್, ಮೈಸೂರ್.

## ಫಿನಾನ್ಷಿಯಲ್ ಇಲಾಖೆ.

1882ನೇ ಮೈಸೂರು ರೆಯಿಲ್‌ವೇ, ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್, ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಟ್ಲ್ ಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

## ಸವಾರ್ ಬಾರ್ ಶಿಬ್ಬಂದೀಗಳಾಗಿ ಕೋರ್ಟಿನ ಜಫ್ತಿಗಳಿಗೋಸ್ಕರ ಡಿಪಾಜಿಟ್ ಬಗ್ಗೆ ಬಂದ ಮೊಬಲಗುಗಳು.

ಟ್ರೆಜರೀ ಇಲಾಖೆ—ಡೆಪ್ಯೂಟಿ ಕಮ್ಮಿಷನರ್‌ಗಳು, ಮತ್ತು ಅಮಲ್ದಾರರು ಇವರುಗಳಿಗೆ.

ಸರ್ಕ್ಯುಲರ್ ನಂ. 1588—ತಾರೀಖು 12ನೇ ಮೇ 1884.

ಕಾಂಪ್ಟ್ರೋಲರವರು ಕೋರುವದೇನಂದರೆ, ಕೋರ್ಟುಗಳಿಂದ ಜಫ್ತಿ ಬಗ್ಗೆ ಸವಾರ್ ಬಾರ್ ಬ್ಬಂದೀಗಳ ರಿಜಿಮೆಂಟ್‌ದಾರರಿಂದಲೂ ಕುರ್ನಂದಾರರಿಂದಲೂ ಡಿಪಾಜಿಟ್ ಯಿಡುವ ಬಗ್ಗೆ ಬರಬಹುದಾದ ಯಾವ ಮೊಬಲಗುಗಳನ್ನಾಗಲಿ, ಡಿಸ್ಟ್ರಿಕ್ಟ್ ಟ್ರೆಜರೀ ಆಫಿಸರ್‌ಗಳೂ, ಅಮಲ್ದಾರುಗಳೂ ತೆಗದುಕೊಳ್ಳತಕ್ಕದ್ದು.

ಪಟ್ಟು ಮೊಬಲಗು ರೆವಿನ್ಯೂ ಡಿಪಾಜಿಟ್ ರಿಜಿಸ್ಟರ್‌ನೊಳಗೆ ಅದನ್ನು ಡಿಪಾಜಿಟ್ ಯಿಟ್ಟ ಆಫಿಸರರ ಹೆಸರಿನಲ್ಲಿ ಬಂದು ನಂಬರ್‌ನೊಳಗೆ ಜಮೆ ಕಟ್ಟಲ್ಪಟ್ಟು, ಅಹೇ ಆಫೀಸರರ ರೀತಿ ಮೇಲೆ ವಾಪಸ್ ಖರ್ಚು ಬರೆಯಲ್ಪಡತಕ್ಕದ್ದು.

ಹೆಚ್. ಹಡ್ಸರ್,
ಕಾಂಪ್ಟ್ರೋಲರ್.